ಹೇಳಲಾಗುವುದಿಲ್ಲ. ಈಗಿಂದೀಗ ಹೊರಟು ಬಾ ಕಮಲಿ, ಮಾತನಾಡುವುದಿದೆ.' ಅಂತ ಹಗ್ಗದ ಮೇಲೆ ನಡೆವಾಗ ಅಲಗುವ ಶರೀರದಂತೆ ನಡುಗುವ ಸ್ವರದಲ್ಲಿ ಹೇಳಿಕೊಂಡಳು.

ಓದು ಗೀದಿನ ಗೋಜಿಗೆ ಹೋಗದೆ ಅಪರೂಪಕ್ಕೊಮ್ಮೆ ಶಾಲೆಗೆ ಹೋಗಿಬಂದು ಮನೆಯಲ್ಲಿ ಚಾಕರಿ ಮಾಡಿಕೊಂಡಿರುತ್ತಿದ್ದ ನನಗೊಂದು ದಾರಿ ಮಾಡಿ ಈ ಹಂತಕ್ಕೆ ಮುಟ್ಟಿಸಿದ್ದೇ ಚಿಕ್ಕಿ. ಅಂಥವಳ ಋಣ ತೀರಿಸಲಂತೂ ಈ ಜನ್ಮದಲ್ಲಿ ಸಾಧ್ಯವಿಲ್ಲ; ಸೇವೆ ಮಾಡುವ ಯೋಗವಾದರೂ ಇರಲಿ ನನ್ನ ನಸೀಬಿನಲ್ಲಿ ಎಂದು ಬೇಡಿದ್ದೂ ವ್ಯರ್ಥವೇ ಆಗುವಂತಿದೆಯಲ್ಲ ಎಂದು ಪಿಚ್ಚೆನಿಸಿತು. ಗಡುಸಾಗಿದ್ದ ಪಾತಿಚಿಕ್ಕಿ ಇಷ್ಟು ನರಮ್ ಆಗಿ ವಿನಂತಿಸುತ್ತಿದ್ದಳೆಂದರೆ ಏನಾದರೂ ತೊಂದರೆಯಾಗಿದ್ದಿರಬಹುದೇ ಎಂಬ ಆತಂಕವೂ ಕಾಡತೊಡಗಿತು...

'ಚಿಕ್ಕಿ ಕಂಗಾಲಾಗಬೇಡ, ನಾನಿದ್ದೇನಲ್ಲ. ಹೀಗೆಯೇ ನಿಂತ ಕೈಲಿ ಹೊರಡುತ್ತೇನೆ ಊರಿಗೆ. ನೀನು ಹೇಳಿದಲ್ಲಿಗೆ ನಾನೇ ಕರೆದುಕೊಂಡು ಹೋಗಿ ಬರುತ್ತೇನೆ. ನಾನಿರುವಾಗ ನೀನ್ಯಾಕೆ ಒಬ್ಬಳೇ ಎಲ್ಲಾದರೂ ಹೋಗಬೇಕು' ಅಂತ ಗದರಿದಂತೆ ಮಾಡಿ, ಒಂದಿಷ್ಟು ಧೈರ್ಯ ಹೇಳಿ ಫೋನಿಟ್ಟೆ.

ಜಗದೀಶನಿಗೂ ಮಕ್ಕಳಿಗೂ ಒಂದಿಷ್ಟು ಸಾಂಬಾರು ಪುಡಿ, ಚಟ್ನಿಪುಡಿಗಳನ್ನೆಲ್ಲ ಮಾಡಿ ಡಬ್ಬಿಯಲ್ಲಿ ತುಂಬಿ, ಯಾವುದಕ್ಕೂ ಇರಲಿ ಎಂದು ವಾರಕ್ಕಾಗುವಷ್ಟು ಬಟ್ಟೆಯೊಂದಿಗೆ ಊರಿಗೆ ಹೊರಟೆ. ಪಾತಿಚಿಕ್ಕಿಯ ಆರೋಗ್ಯ ಹೇಗಿದೆಯೋ, ಯಾವ ಸ್ಥಿತಿಯಲ್ಲಿದ್ದಾಳೋ... ಹೇಳಿ ಕೇಳಲು ಚಿಕ್ಕಿಗೆ ಬೇರೆ ಸ್ವಂತದವರು ಅಂತ ಯಾರೂ ಇಲ್ಲ ಎಂಬ ಚಿಂತೆ ನನಗೆ. ಜಗದೀಶನಿಗೆ ಗೊತ್ತು ಚಿಕ್ಕಿ ನನ್ನ ಬದುಕಿನಲ್ಲಿ ಹಡೆದ ತಾಯ್ತಂದೆಯರಿಗಿಂತಲೂ ಹೆಚ್ಚೆಂದು, ನಾನು ಇದ್ದಕ್ಕಿದ್ದಂತೆ ಹೊರಟೆ ಎಂದರೂ ರಾಗ ತೆಗೆಯದೆ ಕಾರು ಮಾಡಿಸಿ ಕಳಿಸಿದ.

ಎಷ್ಟೋ ಬಾರಿ ಅಂದುಕೊಳ್ಳುತ್ತೇನೆ ಇಂತಹ ಅಕ್ಕರೆಯ ಜೀವನ ನನಗೆ ಒದಗುತ್ತಿತ್ತೋ ಇಲ್ಲವೋ ಎಂದು. ಅಂದು ನಾನು ಪಾತಿಚಿಕ್ಕಿಯ ಕೈಲಿ ಸಿಗದಿದ್ದರೆ ಅಂತ! ವಿದ್ಯಾಭ್ಯಾಸದಲ್ಲಿ ಎಂತಹ ಆಸ್ಥೆಯೂ ಇಲ್ಲದ ನಾನು ಸುಮ್ಮನೆ ಗೆಳತಿಯರೊಟ್ಟಿಗೆ ಶಾಲೆಗೆ ಹೋಗಿ ಕಾಲಹರಣ ಮಾಡುತ್ತಿದ್ದ ಸಮಯದಲ್ಲಿ ಶಾಲೆಯ ಹೊರಗೆ ಬುಗುರಿ ಹಣ್ಣು ಮಾರುತ್ತಿದ್ದ ರುಕ್ಕುಬಾಯಿಗೂ ನನಗೂ ಒಳ್ಳೆಯ ದೋಸ್ತಿ ಕುದುರಿತ್ತು. ಪುಕ್ಕಟೆ ಹಣ್ಣು ಸಿಗುತ್ತದೆಯೆಂದಾದರೆ ನಾನೂ ಏನು ಬೇಕಿದ್ದರೂ ಮಾಡಲು ತಯಾರಿದ್ದೆ.

ರುಕ್ಕುಬಾಯಿಯೂ ನನ್ನಿಂದ ಒಂದಿಷ್ಟು ಲಾಭ ತೆಗೆದುಕೊಳ್ಳುತ್ತಿದ್ದಳು.

ಆಗೆಲ್ಲಾ ಯಲ್ಲಾಪುರಕ್ಕೋ, ಹಳಿಯಾಳ, ಮುಂಡಗೋಡಿಗೋ ಯಾರಾದರೂ ದೊಡ್ಡ ಮನುಷ್ಯರು ಬರುತ್ತಾರೆಂದರೆ ಸಾಕು, ಚಪ್ಪಾಳೆ ತಟ್ಟಲು ಮತ್ತು ಜೈಕಾರ ಹಾಕಲು ಜನ ಬೇಕೆಂದು, ಕಾರ್ಯಕ್ರಮಗಳಿಗೆ ಜನರನ್ನು ಒಯ್ಯಲು ಸುಮಾರಷ್ಟು ಟೆಂಪೊ ಬರುತ್ತಿತ್ತು. ಜನರನ್ನು ಕರೆದುಕೊಂಡು ಹೋಗಿ ವಾಪಸ್ಸು ಕಳಿಸುವುದಷ್ಟೇ ಅಲ್ಲ ಊಟ ಆಸರು, ಜೊತೆಗೆ ಒಂದಿಪ್ಪತ್ತು ರೂಪಾಯಿ ಕೂಡ ಕೊಡುತ್ತಿದ್ದರು. ಮಕ್ಕಳಿದ್ದವರಿಗೆ ಮೂವತ್ತು ರೂಪಾಯಿ. ಮಕ್ಕಳೇನಾದರೂ ರಚ್ಚೆ ಹಿಡಿದು ಅಳುತ್ತಿದ್ದರೆ ಒಂದೈದು ರೂಪಾಯಿ ಹೆಚ್ಚು.

ರುಕ್ಕುಬಾಯಿ ಎಷ್ಟೋ ಬಾರಿ ನನ್ನನ್ನು ಪುಸಲಾಯಿಸಿ ಶಾಲೆಯ ಹೊರಗಿಂದ ಹೊರಗೇ ನನ್ನನ್ನು ಟೆಂಪೊದಲ್ಲಿ ಕರೆದುಕೊಂಡು ಹೋಗುತ್ತಿದ್ದಳು. ನಮ್ಮಂತೆ ಎಲ್ಲೆಲ್ಲಿಂದಲೋ ದುಡ್ಡಿನಾಸೆಗೆ ಚಪ್ಪಾಳೆ ಬಡಿಯಲು ಬಂದ ಸಾಗರದಂತಹ ಜನಜಂಗುಳಿಯ ನಡುವೆ ಎಂಟು ಹತ್ತು ವರ್ಷದ ನನ್ನನ್ನು ತನ್ನ ಮಗಳೆಂಬಂತೆ ಸೊಂಟಕ್ಕೆ ಚಚ್ಚಿಕೊಂಡು ಫೋಸು ಕೊಟ್ಟು ಮೂವತ್ತು ರೂಪಾಯಿಯನ್ನೋ, ಬೇಕಂತಲೇ ಕೆನ್ನೆತ್ತರಾಗುವಂತೆ ಕುಂಡೆ ಚೂಟಿ ನನ್ನನು ಅಳಿಸಿ ಮೂವತ್ತೈದು ರೂಪಾಯಿಯನ್ನೋ ತೆಗೆದುಕೊಳ್ಳುತ್ತಿದ್ದಳು. ಝಳಪಿಸುವ ಬಿಸಿಲಿನ ಧಗೆಯಲ್ಲಿ ಕುಳಿತಿರಬೇಕಿತ್ತು! ಕಾರ್ಯಕ್ರಮಕ್ಕೆ ಯಾವ